Reg. No. | | | | | | | | | | | |

# BCMKALN 202

## II Semester B.Com. Examination, July/August 2023
## (2022 – 23 Batch Onwards) (NEP 2020)
## KANNADA (AECC)

ಸಮಯ : 2 ಗಂಟೆಗಳು ಗರಿಷ್ಠಾಂಕಗಳು : 60

I. ಈ ಕೆಳಗಿನವುಗಳಲ್ಲಿ ಯಾವುದಾದರೂ **ಎರಡು** ಪ್ರಶ್ನೆಗಳಿಗೆ ಉತ್ತರಿಸಿರಿ. (2×8=16)

1) ಡಿ.ವಿ.ಜಿ.ಯವರ ದೃಷ್ಟಿಯಲ್ಲಿ ಸೌಂದರ್ಯ ಮತ್ತು ಅದರ ವಿವಿಧ ಮಜಲುಗಳನ್ನು ದೃಷ್ಟಾಂತಗಳೊಂದಿಗೆ ಚರ್ಚಿಸಿರಿ.

2) ಭಕ್ತಿಯ ವಿವಿಧ ಸ್ವರೂಪಗಳು ಮತ್ತು ಡಾಂಭಿಕ ಭಕ್ತಿಯ ವಿಡಂಬನೆ ದಾಸಿಮಯ್ಯನ ವಚನಗಳಲ್ಲಿ ಹೇಗೆ ಮೂಡಿ ಬಂದಿದೆ ? ವಿವರಿಸಿರಿ.

3) ಜಗತ್ತು ಮತ್ತು ಜಗತ್ತಿನ ಚರಾಚರ ವಸ್ತುಗಳು ಸೃಷ್ಟಿಯಾದ ಬಗೆಯನ್ನು ಮಂಟೇಸ್ವಾಮಿಯ ಕಾವ್ಯದ ಆಧಾರದಲ್ಲಿ ವಿವರಿಸಿರಿ.

4) ಆದೇಶ ಪತ್ರ ಅಥವಾ ನಡೆವಳಿಗಳು ಎಂದರೇನು ? ಉದಾಹರಣೆ ಸಹಿತ ವಿವರಿಸಿರಿ.

II. ಈ ಕೆಳಗಿನವುಗಳಲ್ಲಿ ಯಾವುದಾದರೂ **ಎರಡು** ಪ್ರಶ್ನೆಗಳಿಗೆ ಸಂಕ್ಷಿಪ್ತವಾಗಿ ಉತ್ತರಿಸಿರಿ. (2×6=12)

1) ಪಂಪನ ಬನವಾಸಿ ದೇಶದ ವರ್ಣನೆಯನ್ನು ಕುರಿತು ಬರೆಯಿರಿ.

2) ಅಮರನಾಥ ಕ್ಷೇತ್ರದ ಪೌರಾಣಿಕ ಹಿನ್ನೆಲೆಯನ್ನು ವಿವರಿಸಿರಿ.

3) ಕೌರವ ಪಾಂಡವರ ಮಕ್ಕಳಾಟವನ್ನು 'ಧರ್ಮ ವಿಜಯ' ಕಾವ್ಯದಲ್ಲಿ ಚಿತ್ರಿತವಾದ ಬಗೆಯನ್ನು ವಿವರಿಸಿರಿ.

4) ನಂಬಿದ ಕೃಷಿಯು ಎಂದಿಗೂ ಕೈ ಬಿಡದು ಎಂಬುದು ಅನ್ನದಾತ ಕಥೆಯಲ್ಲಿ ಹೇಗೆ ಚಿತ್ರಿತವಾಗಿದೆ ?

III. **ಒಂದು** ಪದ್ಯದ ಸಂದರ್ಭ ಸೂಚಿಸಿ, ಭಾವ ಸ್ವಾರಸ್ಯವನ್ನು ವಿವರಿಸಿರಿ. (1×4=4)

1) ಕುಂಟೆ ತುದಿಗೆ ಕೊರಡು ಹಾಕಿ ಹೆಂಟೆ ಮಣ್ಣು ಸಮ ಮಾಡಿ
ರೆಂಟೆ ಹೊಡೆದು ಬೆಳೆಸುವುದು ಹೊಟ್ಟೆಗಾಗಿ ಗೇಣು ಬಟ್ಟೆಗಾಗಿ
ಬೆಲ್ಲದಂತೆ ಮಾತನಾಡಿ ಎಲ್ಲರನ್ನು ಮರಳು ಮಾಡಿ
ಸುಳ್ಳು ಬೊಗಳಿ ತಿಂಬುವುದು ಹೊಟ್ಟೆಗಾಗಿ ಗೇಣು ಬಟ್ಟೆಗಾಗಿ.

Shri Dharmasthala Manjunatheshwara
College of Business Management Library
MANGALORE - 575 003

2) ಬೆಂಡೆ ಬಿತ್ತುವುದಾ ? ತೊಂಡೆ ಹಬ್ಬಿಸುವುದಾ ?
ಭತ್ತ ಬೆಳೆಯುವುದಾ ?
ತುಸು ಹೆಚ್ಚೇ ಇದ್ದರೆ ಕಟ್ಟಡ ಕಟ್ಟಿಸಿ
ಬಿಕರಿಗಿಡುವುದಾ ?
ಅವರವರ ಅನುಕೂಲಕ್ಕೆ ತಕ್ಕ ಹಾಗೆ.

IV. ಯಾವುದಾದರೂ **ಮೂರು** ವಾಕ್ಯಗಳ ಸಂದರ್ಭ ಸೂಚಿಸಿ, ವಿಶೇಷತೆಯನ್ನು ತಿಳಿಸಿರಿ. **(3×4=12)**

1) ಆರಂಕುಸವಿಟ್ಟೊಡಂ ನೆನೆವುದೆನ್ನ ಮನಂ ಬನವಾಸಿ ದೇಶಮಂ.
2) ಸೀತೆಯ ಕಣ್ಣೀರೊಳು ಮಿಂದ ಜಡೆ.
3) ಅಂಧಕನ ಕೈಯ ಅಂಧಕ ಹಿಡಿವಂತೆ.
4) ಉಂಬದವ ಏವಕ್ಕಿ ಅಶನವೋ !
5) ಕ್ರಯ–ವಿಕ್ರಯಗಳ ತಕ್ಕಡಿಯೊಳಗೆ ತೂಗಿಸಿಕೊಂಡೇ ನಿಲ್ಲುತ್ತದೆ.

V. **ಎರಡರ** ಕುರಿತು ಟಿಪ್ಪಣಿ ಬರೆಯಿರಿ. **(2×4=8)**

1) ಪಂಪ
2) ಅಮರನಾಥ ದರ್ಶನ
3) ಒಂದು ಖಾಲಿ ಜಾಗ
4) ಬೃಹದುದ್ದಿಮೆಗಳ ಜಾಗತೀಕರಣ.

VI. ಕೆಳಗಿನ ಪ್ರಶ್ನೆಗಳಿಗೆ **ಒಂದೊಂದು** ವಾಕ್ಯದಲ್ಲಿ ಉತ್ತರ ಬರೆಯಿರಿ. **(1×8=8)**

1) ಕನ್ನಡದ ಮೂರನೇ ರಾಷ್ಟ್ರಕವಿ ಯಾರು ?
2) ಕನ್ನಡದ 'ಭಾರತೀಯ ಕಾವ್ಯ ಮೀಮಾಂಸೆ' ಕೃತಿಯನ್ನು ಬರೆದ ಆಚಾರ್ಯರು ಯಾರು ?
3) ಜೇಡರದಾಸಿಮಯ್ಯನ ಅಂಕಿತನಾಮವೇನು ?
4) ಕನಕದಾಸರ ಅಂಕಿತನಾಮವೇನು ?
5) ಯಾರ ದೇಹದ ಭಾಗಗಳಿಂದ ಭೂಮಿಯ ಕಲ್ಲು, ಮಣ್ಣು, ಬೆಟ್ಟ ಗುಡ್ಡಗಳು ಸೃಷ್ಟಿಯಾದವು ?
6) ಹವಿಗನ್ನಡದ ಮಹಾಕವಿಯೆಂದು ಪ್ರಸಿದ್ಧರಾದವರು ಯಾರು ?
7) ನೌಕರನೊಬ್ಬನ ಮೇಲೆ ದೂರುಗಳು ಬಂದಾಗ ಅವನಿಂದ ವಿವರಣೆ ಕೇಳಿ ಮೇಲಾಧಿಕಾರಿ ಬರೆಯುವ ಪತ್ರದ ಹೆಸರೇನು ?
8) 'ಕಲ್ಲು ದೇವರು ಕರಗಲಿಲ್ಲ' ಕಥಾ ಸಂಕಲನದಿಂದ ಪಠ್ಯಕ್ಕೆ ಆಯ್ದುಕೊಳ್ಳಲಾದ ಕಥೆಯ ಹೆಸರೇನು ?